# 4ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು

**ಸಿಸಿ ನಂ. 6532/2016 ಚಾಸಾಃ 1 ಪ್ರಾಸಾಃ 1**

| | | |
|---|---|---|
| ಸಾಕ್ಷಿದಾರರ ಹೆಸರು | : | ಡಾ.ಭಾರ್ಗವಿ |
| ಗಂಡನ ಹೆಸರು | : | ಡಾ.ಪ್ರಭಾಕರ್ |
| ವಯಸ್ಸು | : | 52 ವರ್ಷ |
| ವೃತ್ತಿ | : | ವೈದ್ಯಾಧಿಕಾರಿ |
| ವಾಸ | : | ಬಸವೇಶ್ವರನಗರ, ಬೆಂಗಳೂರು |

**ಸಾಕ್ಷಿಯನ್ನು ದಿಃ 03.09.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ: ಪ್ರಾಜ್ಞಾ ಹಿ.ಸಾ.ಸ.ಅ ರವರಿಂದಃ-**

2013-14ನೇ ಸಾಲಿನಲ್ಲಿ ನಾನು ಬೆಂಗಳೂರಿನ ಶುಶ್ರೂತ ಮೆಡಿಕಲ್ ಆಸ್ಪತ್ರೆಯಲ್ಲಿ ವೈದ್ಯರಾಗಿ ಮತ್ತು ಆಡಳಿತಾಧಿಕಾರಿಯಾಗಿ ಕರ್ತವ್ಯ ನಿರ್ವಹಣೆ ಮಾಡುತ್ತಿದ್ದೆನು. ಆರೋಪಿಯು ಆ ಸಮಯದಲ್ಲಿ ಸದರಿ ಆಸ್ಪತ್ರೆಯ ಅಸಿಸ್ಟಂಟ್ ಸಿಸ್ಟಮ್ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದರು. ಸದರಿ ಆಸ್ಪತ್ರೆಯ ಮಾಲೀಕರಲ್ಲಿ ಒಬ್ಬರಾದ ಡಾ.ಶೇಖರ್ ರವರು ಆರೋಪಿಯು ದಾಖಲಾತಿಗಳನ್ನು ಸೃಷ್ಟಿಸಿ ಮೊಬಲಗು 20 ಲಕ್ಷಕ್ಕಿಂತಲೂ ಹೆಚ್ಚು ಹಣವನ್ನು ಬಿಲ್ ಮಾಡಿ ತೆಗೆದುಕೊಂಡು ದುರುಪಯೋಗ ಮಾಡಿಕೊಂಡಿದ್ದು ಈ ಸಂಬಂಧ ಪೊಲೀಸ್ ಠಾಣೆಗೆ ದೂರು ಸಲ್ಲಿಸುವಂತೆ ನನಗೆ ಸೂಚಿಸಿದರು. ನಾನು ಆಸ್ಪತ್ರೆಯ ಮುಖ್ಯಾಧಿಕಾರಿಯಾಗಿದ್ದರಿಂದ ಸದರಿ ಮಾಲೀಕರ ಸೂಚನೆಯಂತೆ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ದೂರನ್ನು ಸಾಕ್ಷಿದಾರರು ನೋಡಿ ಗುರ್ತಿಸಿದ್ದು ಅದನ್ನು ನಿಪಿ-1 ಎಂದು ಹಾಗೂ ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿಪಿ-1ಎ ಎಂದು ಗುರ್ತಿಸಲಾಯಿತು. ಆರೋಪಿಯು ನಕಲಿ ವೋಚರ್ ಗಳನ್ನು ಸೃಷ್ಟಿಸಿ ಅದನ್ನು ಆಸ್ಪತ್ರೆಗೆ ಸಲ್ಲಿಸಿ ಬಿಲ್ ಮಾಡಿಕೊಂಡು ಹಣ ತೆಗೆದುಕೊಂಡಿದ್ದರು.

ದೂರು ಸಲ್ಲಿಸಿದ ನಂತರ ಪೊಲೀಸರು ನಮ್ಮ ಆಸ್ಪತ್ರೆಗೆ ಬಂದು ಅಲ್ಲಿ ಪರಿಶೀಲಿಸಿ ಸ್ಥಳ ಪಂಚನಾಮೆ ಮಾಡಿರುತ್ತಾರೆ. ಸದರಿ ಸ್ಥಳ ಪಂಚನಾಮೆಯನ್ನು ಸಾಕ್ಷಿದಾರರು ನೋಡಿ ಗುರ್ತಿಸುತ್ತಿದ್ದು ಅದನ್ನು ನಿಪಿ-2 ಹಾಗೂ ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿಪಿ-2ಎ ಎಂದು ಗುರ್ತಿಸಲಾಯಿತು.

ದೂರು ಸಲ್ಲಿಸಿದ ಸುಮಾರು 15 ದಿನಗಳ ನಂತರ ಪುನಃ ನಾನು ಪೊಲೀಸ್ ಠಾಣೆಗೆ ಹೋದೆನು. ಆಗ ನನಗೆ ಆರೋಪಿ ನಕಲಿ ಕಂಪನಿಗಳನ್ನು ಸೃಷ್ಟಿಸಿ ದಾಖಲಾತಿಗಳನ್ನು ಹಾಜರುಪಡಿಸಿರುವುದಾಗಿ ತಿಳಿದು ಬಂದಿರುತ್ತದೆ. ನಾನು ದೂರಿನಲ್ಲಿ ನಮೂದಿಸಿದ ಆರೋಪಿ 2 ರಿಂದ 6 ರ ಕಂಪನಿಗಳು ಆಸ್ತಿತ್ವದಲ್ಲಿ ಇರುವುದಿಲ್ಲವೆಂದು ಸದರಿ ಕಂಪನಿಯ ಹೆಸರಿನಲ್ಲಿ ಆರೋಪಿ ನಕಲಿ ದಾಖಲಾತಿಗಳನ್ನು ಸೃಷ್ಟಿಸಿರುವುದಾಗಿ ತಿಳಿದು ಬಂದಿರುತ್ತದೆ. ಈ ಸಂಬಂಧ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ. ಆರೋಪಿಯು ಮೊಬಲಗು 20 ಲಕ್ಷ ರೂಗಳನ್ನು ದುರುಪಯೋಗ ಮಾಡಿಕೊಂಡು ನಮ್ಮ ಆಸ್ಪತ್ರೆಗೆ ವಂಚನೆ ಮಾಡಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ವಿ.ಎನ್.ಆರ್. ವಕೀಲರಿಂದಃ**

ಆಸ್ಪತ್ರೆಯ ಮಾಲೀಕರಾದ ಡಾ.ಶೇಖರ್ ರವರ ಸೂಚನೆಯಂತೆ ನಾನು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿ. ಡಾ.ಸುಕುಮಾರ್ ಶೆಟ್ಟಿ, ಡಾ.ಹೇಮಚಂದ್ರ ಶೆಟ್ಟಿ, ಡಾ.ಮುನಿಚೂಡಪ್ಪ, ಡಾ.ಸಂಪತ್ ಕುಮಾರ್, ಡಾ.ಸುಬ್ರಮಣ್ಯಂ ರವರು ಸದರಿ ಆಸ್ಪತ್ರೆಯ ಜಂಟಿ ಮಾಲೀಕರಾಗಿದ್ದರು. ಡಾ.ಶೇಖರ್ ರವರನ್ನು ಹೊರತುಪಡಿಸಿ ಬೇರೆ ಮಾಲೀಕರು ನನಗೆ ದೂರು ಸಲ್ಲಿಸಲು ಸೂಚಿಸಿರುವುದಿಲ್ಲ. ಈ ವಿಚಾರದ ಕುರಿತು ಮೇಲ್ಕಂಡ ವೈದ್ಯರು ನನಗೆ ಯಾವುದೇ ವಿಚಾರವನ್ನು ತಿಳಿಸಿರುವುದಿಲ್ಲ.

ಸೆಪ್ಟೆಂಬರ್ ಅಥವಾ ಅಕ್ಟೋಬರ್-2014 ರಲ್ಲಿ ನಾನು ದೂರು ಸಲ್ಲಿಸಿರುತ್ತೇನೆ. ನಿಖರವಾದ ದಿನಾಂಕವನ್ನು ನನಗೆ ಹೇಳಲು ಆಗುವುದಿಲ್ಲ. ನಿಪಿ-2 ಪಂಚನಾಮೆಗೆ ನಾನು ಎಲ್ಲಿ ಸಹಿ ಮಾಡಿರುತ್ತೇನೆ ಎಂದು ನೆನಪಿರುವುದಿಲ್ಲ. ಪೊಲೀಸರು ನನ್ನ ಯಾವುದೇ ಹೇಳಿಕೆಯನ್ನು ದಾಖಲಿಸಿರುವುದಿಲ್ಲ. ನಾನು

ದೂರಿನ ಜೊತೆ ಯಾವುದೇ ದಾಖಲಾತಿ ಸಲ್ಲಿಸಿರುವುದಿಲ್ಲ ಎಂದರೆ ನನಗೆ ನೆನಪಿಲ್ಲ. ನಾನು ಯಾವುದೇ ಬಿಲ್ಲುಗಳನ್ನು ನೋಡಿರುವುದಿಲ್ಲ ಮತ್ತು ಅದನ್ನು ಪೊಲೀಸರಿಗೆ ಕೊಟ್ಟಿರುವುದಿಲ್ಲ. ನಾನು ದೂರು ದಾಖಲಿಸಿರುವುದನ್ನು ಹೊರತು ಪಡಿಸಿ ಬೇರೆ ಯಾವುದೇ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಯಾವುದೇ ಲೆಕ್ಕಪತ್ರಗಳನ್ನು ಪರಿಶೀಲಿಸಿರುವುದಿಲ್ಲ. ಆರೋಪಿಗೆ ಸೇರಿದ ಖಾತೆಯನ್ನು ಸಹ ನಾನು ನೋಡಿರುವುದಿಲ್ಲ. ಡಾ.ಶೇಖರ್ ರವರ ಮಾಹಿತಿಯಂತೆ ನಾನು ನಡೆದುಕೊಂಡಿರುತ್ತೇನೆ ಎಂದರೆ ಸರಿ. ನನಗೆ ಎಲ್ಲಾ ವಿಚಾರಗಳ ಬಗ್ಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿ. ಪೊಲೀಸರು ಆಸ್ಪತ್ರೆಗೆ ಬಂದು ನನ್ನ ಸಮಕ್ಷಮ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಪಂಚನಾಮೆಗೆ ಪಂಚನಾಮೆ ಮಾಡಿದ ದಿನಾಂಕ ಸಹಿ ಮಾಡಿರುವುದಿಲ್ಲ ಎಂದರೆ ನೆನಪಿಲ್ಲ. ಯಾವುದೇ ವಿಚಾರ ಗೊತ್ತಿಲ್ಲದಿದ್ದರು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**4ನೇ ಎ.ಸಿ.ಜೆ.ಎಂ.ನ್ಯಾ.,**